## 2018 ಕ.ತೀ.ವ. 1061

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

### ಶ್ರೀಮತಿ ಮಚಿ ಪೂಜಾರ್ತಿ -ವಿರುದ್ಧ- ಸಹಾಯಕ ಆಯುಕ್ತರು, ಕುಂದಾಪುರ, ಉಡುಪಿ ಜಿಲ್ಲೆ ಮತ್ತು ಮತ್ತೊಬ್ಬರು*

ಕರ್ನಾಟಕ ಭೂ-ಸುಧಾರಣೆಗಳ ಅಧಿನಿಯಮ, 1961ರ 77-ಎ ಪ್ರಕರಣದ ಮೇರೆಗಿನ ರಿಟ್ ಅರ್ಜಿ.

ಈ ರಿಟ್ ಅರ್ಜಿಗಳಲ್ಲಿ, ಅರ್ಜಿದಾರರು, ಅಪೀಲು ಸಂ.628/2007, ದಿನಾಂಕ 30.11.2015ರಲ್ಲಿ ಕರ್ನಾಟಕ ಅಪೀಲು ನ್ಯಾಯಾಧಿಕರಣವು (ಸಂಕ್ಷಿಪ್ತವಾಗಿ 'ಕೆಎಟಿ') ಅಪೀಲಿನಲ್ಲಿ ಸ್ಥಿರೀಕರಿಸಿದ ಕರ್ನಾಟಕ ಭೂ-ಸುಧಾರಣೆಗಳ ಅಧಿನಿಯಮ, 1961ರ (ಸಂಕ್ಷಿಪ್ತವಾಗಿ 'ಅಧಿನಿಯಮ') 77-ಎ ಪ್ರಕರಣದ ಮೇರೆಗೆ ಭರ್ತಿಮಾಡಿದ 7-ಎ ನಮೂನೆಯನ್ನು ತಿರಸ್ಕರಿಸಿ ಸಹಾಯಕ ಆಯುಕ್ತರು ಹೊರಡಿಸಿದ ದಿನಾಂಕ 09.02.2007ರ ಆದೇಶವನ್ನು ಪ್ರಶ್ನಿಸಿದ್ದಾರೆ.

ಅರ್ಜಿದಾರರು ಸರ್ವೆ ಸಂಖ್ಯೆ: 68/2ರ ಸ್ಥಳದಲ್ಲಿ ಸರ್ವೆ ಸಂಖ್ಯೆ: 189/4 ಮರುಸೇರಿಸಲು 7-ಎ ನಮೂನೆಯಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ತಿದ್ದುಪಡಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಸರ್ವೆ ಸಂಖ್ಯೆ: 68/2 ಇದು 44 ಸೆಂಟ್‌ಗಳ ಅಳತೆಯದ್ದಾಗಿದ್ದರೆ, ಸರ್ವೆ ಸಂಖ್ಯೆ: 189/4 ಇದು 5 ಎಕರೆ 1 ಸೆಂಟ್ ಅಳತೆಯದ್ದಾಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಸರ್ವೆ ಸಂಖ್ಯೆಗಳಿಗೆ ಮತ್ತು ಅವುಗಳ

ರಿಟ್ ಅರ್ಜಿ ಸಂಖ್ಯೆ: 8574/2016 ಮತ್ತು ರಿಟ್ ಅರ್ಜಿ ಸಂಖ್ಯೆ: 48997-998/2016 (ಎಲ್‌ಆರ್-ಆರ್‌ಇಎಸ್), ದಿನಾಂಕ 10ನೇ ಜುಲೈ, 2017.

ಗಡಿಗಳಿಗೆ ಸಂಬಂಧಿಸಿದಂತೆ ಯಾವುದೇ ದ್ವಂದ್ವವಿಲ್ಲ. ಆದಾಗ್ಯೂ, ಅರ್ಜಿದಾರರು 7–ಎ ನಮೂನೆಯನ್ನು ತಿದ್ದುಪಡಿ ಮಾಡುವ ಮೂಲಕ ವಿವಿಧ ಸರ್ವೆ ಸಂಖ್ಯೆಗಳನ್ನು ಮರು–ಸೇರಿಸಲು ಬಯಸುತ್ತಿದ್ದಾರೆ.

ಸರ್ವೆ ಸಂಖ್ಯೆ: 68/2ರ ಸ್ಥಾನದಲ್ಲಿ ಸರ್ವೆ ಸಂಖ್ಯೆ: 189/4ನ್ನು ಮರು–ಸೇರಿಸಲು ತಿದ್ದುಪಡಿ ಕೋರಿ ಅರ್ಜಿ ಸಲ್ಲಿಸಿರುವುದನ್ನು, ಮುಖ್ಯ ಆದೇಶವನ್ನು ಹೊರಡಿಸುವಾಗ ಪರಿಗಣಿಸಿರುವುದಿಲ್ಲ; ನಮೂನೆ–7ರಲ್ಲಿ ಸಲ್ಲಿಸಲಾಗಿರುವ ಅರ್ಜಿಯನ್ನು ತಿರಸ್ಕರಿಸಿರುವುದು, ವಿವಿಧ ಸರ್ವೆ ಸಂಖ್ಯೆಗಳಿಗೆ ಸಂಬಂಧಪಟ್ಟಂತೆ ಇದೆಯೇ ಹೊರತು, ನಮೂನೆ–7ಎ ಮೂಲಕ ಅರ್ಜಿದಾರನು ಕ್ಲೇಮು ಮಾಡಿರುವಂಥ ಸರ್ವೆ ಸಂಖ್ಯೆಗಳಿಗೆ ಸಂಬಂಧಪಟ್ಟಿರುವುದಿಲ್ಲ; ಮತ್ತು ಈ ಮೊಕದ್ದಮೆಯ ವಾಸ್ತವಾಂಶಗಳು ಮತ್ತು ಸಂದರ್ಭಗಳ ಕಡೆಗೆ ಗಮನ ಹರಿಸಿರುವುದಿಲ್ಲ ಎಂದು ಮುಖ್ಯ ವಾದದಲ್ಲಿ ಒತ್ತು ನೀಡಿ ಹೇಳಲಾಗಿದೆ.

ನಮೂನೆ–7ಎ ಅಡಿಯಲ್ಲಿ ಕ್ಲೇಮಿನ ಗುಣಾರ್ಹತೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ದಿನಾಂಕ: 01.03.1974ರಂದು ಇದ್ದಂತೆ ಜಮೀನನ್ನು ಗೇಣಿಗೆ ನೀಡಲಾಗಿತ್ತು ಎಂದು ಸಾಬೀತುಪಡಿಸಲು ಯಾವುದೇ ಮುಖ್ಯ ಸಾಕ್ಷ್ಯ ಇರಲಿಲ್ಲವೆಂದು ಸಹಾಯಕ ಆಯುಕ್ತರು ತಮ್ಮ ನಿರ್ಣಯವನ್ನು ದಾಖಲಿಸಿದ್ದಾರೆ. ಈ ನ್ಯಾಯಾಲಯದ ಮುಂದೆ ಸಹ, ದಿನಾಂಕ: 01.03.1974ರಂದು ಇದ್ದಂತೆ ರಾಜ್ಯದಲ್ಲಿ ಜಮೀನು ನಿಹಿತವಾಗಿತ್ತೆಂದು ತೋರಿಸಲು ಯಾವುದೇ ಮುಖ್ಯ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ. ಸರ್ವೆ ಸಂಖ್ಯೆ: 68/2 ಅಥವಾ ಸರ್ವೆ ಸಂಖ್ಯೆ: 189/4 ಇವು ಅರ್ಜಿದಾರರ ಸಾಗುವಳಿಗೆ ಒಳಗಾಗಿದ್ದವು ಎಂದು ತೋರಿಸುವ ಸಂಬಂಧದಲ್ಲಿ

**ಯಾವುದೇ ಅಂಥ ದಾಖಲೆ ಇರುವುದಿಲ್ಲ. ಆದುದರಿಂದ ಗೇಣಿಗೆ ಒಳಪಟ್ಟ ಜಮೀನಾಗಿ ಅದು ರಾಜ್ಯದಲ್ಲಿ ನಿಹಿತವಾಗಿತ್ತು.**

**ಆದುದರಿಂದ, ಇದು, ಅರ್ಜಿದಾರರು ಯಾವುದೇ ಹಕ್ಕುಗಳನ್ನು ಹೊಂದಿರದ ಅಥವಾ ಅದನ್ನು ಸಾಬೀತುಪಡಿಸುವಲ್ಲಿ ಅವರು ಯಶಸ್ವಿಯಾಗದಿರುವ ಆಕ್ಷೇಪಣೆಯಲ್ಲಿರುವ ಜಮೀನುಗಳ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳನ್ನು ಪದೇ ಪದೇ ಕೋರಿ ಕ್ಲೇಮನ್ನು ಮಂಡಿಸಲು ಅವರು ಪ್ರಯತ್ನಿಸಿರುವ ಮೊಕದ್ದಮೆಯಾಗಿದೆ. ಆದ್ದರಿಂದ, ಕೆಳಗೆ ಉಲ್ಲೇಖಿಸಿರುವ ಎರಡೂ ಪ್ರಾಧಿಕಾರಿಗಳು ದಾಖಲಿಸಿದ ಸಮವರ್ತಿ ನಿರ್ಣಯಗಳ ವಿಷಯದಲ್ಲಿ ದೋಷಗಳನ್ನು ಕಂಡುಹಿಡಿಯಲಾಗುವುದಿಲ್ಲ. ಆದುದರಿಂದ, ಈ ರಿಟ್ ಅರ್ಜಿಗಳನ್ನು ವಜಾಗೊಳಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ:*** ***ಪ್ಯಾರಾದಲ್ಲಿ***

1. *2013(1) ಎಕೆಆರ್ 555*
   *ಲೋಕಯ್ಯ ಪೂಜಾರಿ ಮತ್ತು ಇನ್ನೊಬ್ಬರು*
   *-ವಿರುದ್ಧ- ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 8*

ಅರ್ಜಿದಾರರ ಪರ : ಶ್ರೀ ವೆಂಕಟೇಶ್ ಸಿ. ಮತ್ತು
ಶ್ರೀ ಶಂಕರ್ ರೆಡ್ಡಿ ಸಿ. ವಕೀಲರು;
1ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಬಿ.ಪಿ. ರಾಧ,
ಹೆಚ್ಚುವರಿ ಸರ್ಕಾರಿ ವಕೀಲರು;
ಸಿ/2ನೇ ಪ್ರತ್ಯರ್ಜಿದಾರರ ಪರ : ಶ್ರೀ ಎ. ಆನಂದ ಶೆಟ್ಟಿ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಬಿ.ಎಸ್. ಪಾಟೀಲ್:**

1. ಈ ರಿಟ್ ಅರ್ಜಿಗಳಲ್ಲಿ, ಅರ್ಜಿದಾರರು, ಅಪೀಲು ಸಂಖ್ಯೆ: 628/2007, ದಿನಾಂಕ: 30.11.2015ರಲ್ಲಿ ಕರ್ನಾಟಕ ಅಪೀಲು ನ್ಯಾಯಾಧೀಕರಣವು (ಸಂಕ್ಷಿಪ್ತವಾಗಿ 'ಕೆಎಟಿ') ಅಪೀಲಿನಲ್ಲಿ ಸ್ಥಿರೀಕರಿಸಿದ ಕರ್ನಾಟಕ ಭೂ–ಸುಧಾರಣೆಗಳ ಅಧಿನಿಯಮ, 1961ರ (ಸಂಕ್ಷಿಪ್ತವಾಗಿ 'ಅಧಿನಿಯಮ') 77–ಎ ಪ್ರಕರಣದ ಮೇರೆಗೆ ಭರ್ತಿಮಾಡಿದ 7–ಎ ನಮೂನೆಯನ್ನು ತಿರಸ್ಕರಿಸಿ ಸಹಾಯಕ ಆಯುಕ್ತರು ಹೊರಡಿಸಿದ ದಿನಾಂಕ: 09.02.2007ರ ಆದೇಶವನ್ನು ಪ್ರಶ್ನಿಸಿದ್ದಾರೆ.

2. ಅರ್ಜಿದಾರರ ತಾಯಿಯಾದ ಮೃತ ಮರ್ಲಿ ಪೂಜಾರ್ತಿ ಇವರು, ರಾಮಕೃಷ್ಣ ಕಾಮತ್ ಹೆಸರಿನ ಪ್ರತ್ಯರ್ಜಿದಾರ ಸಂಖ್ಯೆ: 2 ಇವರ ತಂದೆಯವರ ಬಳಿ ಗೇಣಿದಾರನಾಗಿ ಕೆಲವು ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿದ್ದರು. ಅವರು ಮೂರು ಜಮೀನುಗಳ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳನ್ನು ಕ್ಲೇಮು ಮಾಡಿ ನಮೂನೆ–7ರಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಸದರಿ ಅರ್ಜಿಯ ಕುರಿತು ವಿಚಾರಿಸಲಾಗಿ, ಎರಡು ಸರ್ವೆ ಸಂಖ್ಯೆಗಳಲ್ಲಿರುವ ಜಮೀನುಗಳ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳನ್ನು ನೀಡಿ ಭಾಗಶಃವಾಗಿ ಕ್ಲೇಮಿಗೆ ಅನುಮತಿ ನೀಡಿದ್ದು, ಸರ್ವೆ ಸಂಖ್ಯೆ: 67/2ರ ಸಂಬಂಧದಲ್ಲಿನ ಕ್ಲೇಮನ್ನು ತಿರಸ್ಕರಿಸಲಾಗಿದೆ. ಈ ಆದೇಶವನ್ನು ದಿನಾಂಕ: 29.08.1980ರಂದು ಹೊರಡಿಸಲಾಗಿದೆ.

3. 77ಎ ಪ್ರಕರಣವನ್ನು ಸೇರಿಸುವ ಮೂಲಕ ಅಧಿನಿಯಮಕ್ಕೆ ತಿದ್ದುಪಡಿ ತಂದ ನಂತರ, ಅರ್ಜಿದಾರರ ತಾಯಿಯು, ಸರ್ವೆ ಸಂಖ್ಯೆ: 67/2 ಮತ್ತು ಸರ್ವೆ ಸಂಖ್ಯೆ: 68/2ರ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳನ್ನು ಕ್ಲೇಮು ಮಾಡಿ ನಮೂನೆ 7–ಎ ಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು. ಸದರಿ ಅರ್ಜಿಯು

ಇತ್ಯರ್ಥದಲ್ಲಿರುವಾಗಲೇ ಆಕೆಯು ಮರಣ ಹೊಂದಿದರು. ಆಗ ಅರ್ಜಿದಾರರ ಹೆಸರನ್ನು ಭೂ–ನ್ಯಾಯಾಧಿಕರಣದ ಮುಂದೆ ದಾಖಲೆಯಲ್ಲಿ ಸೇರಿಸಲಾಯಿತು.

4. ಅರ್ಜಿದಾರರು ಸರ್ವೆ ಸಂಖ್ಯೆ: 68/2ರ ಸ್ಥಳದಲ್ಲಿ ಸರ್ವೆ ಸಂಖ್ಯೆ: 189/4ನ್ನು ಮರು–ಸೇರಿಸಲು ನಮೂನೆ 7–ಎ ಯಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ತಿದ್ದುಪಡಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಸರ್ವೆ ಸಂಖ್ಯೆ: 68/2 ಇದು 44 ಸೆಂಟ್‌ಗಳ ಅಳತೆಯದ್ದಾಗಿದ್ದರೆ, ಸರ್ವೆ ಸಂಖ್ಯೆ: 189/4 ಇದು 5 ಎಕರೆ 1 ಸೆಂಟ್ ಅಳತೆಯದ್ದಾಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಸರ್ವೆ ಸಂಖ್ಯೆಗಳಿಗೆ ಮತ್ತು ಅವುಗಳ ಗಡಿಗಳಿಗೆ ಸಂಬಂಧಿಸಿದಂತೆ ಯಾವುದೇ ದ್ವಂದ್ವವಿಲ್ಲ. ಆದಾಗ್ಯೂ, ಅರ್ಜಿದಾರರು ನಮೂನೆ 7–ಎ ಯನ್ನು ತಿದ್ದುಪಡಿ ಮಾಡುವ ಮೂಲಕ ವಿವಿಧ ಸರ್ವೆ ಸಂಖ್ಯೆಗಳನ್ನು ಮರುಸೇರಿಸಲು ಬಯಸುತ್ತಿದ್ದಾರೆ.

5. ತಿದ್ದುಪಡಿಯನ್ನು ಕೋರಿ ಸಲ್ಲಿಸಲಾದ ಅರ್ಜಿಯನ್ನು ದಿನಾಂಕ: 09.02.2007ರಂದು ತಿರಸ್ಕರಿಸಲಾಗಿದೆ. ಅದೇ ದಿನದಂದು, ಸಹಾಯಕ ಆಯುಕ್ತರು, ಅಂತಿಮ ಆದೇಶವನ್ನು ಹೊರಡಿಸಿದ್ದು, ಆ ಮೂಲಕ, ದಿನಾಂಕ: 01.03.1974ರಂದು ಅರ್ಜಿದಾರನು ಗೇಣಿದಾರನಾಗಿದ್ದನೆಂದು ತೋರಿಸಲು ತಮ್ಮ ಮುಂದೆ ಯಾವುದೇ ವಿಷಯವನ್ನು ಮಂಡಿಸಿರುವುದಿಲ್ಲವೆಂದು ತೀರ್ಮಾನಿಸಿ, 77–ಎ ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ಅಂತಿಮ ಆದೇಶವನ್ನು ಹೊರಡಿಸಿದ್ದಾರೆ ಮತ್ತು ಈ ಜಮೀನು ರಾಜ್ಯದಲ್ಲಿ ನಿಹಿತವಾಗಿದೆ. ಕೆಎಟಿ ಮುಂದೆ ಸಲ್ಲಿಸಲಾದ ಅಪೀಲಿನಲ್ಲಿ ಈ ಆದೇಶವನ್ನು ಪ್ರಶ್ನಿಸಲಾಯಿತು. ಕೆಎಟಿ ಈ ಅಪೀಲನ್ನು ವಜಾಗೊಳಿಸಿದೆ.

6. ಅರ್ಜಿದಾರನು ನಮೂನೆ–7ನ್ನು ಸಲ್ಲಿಸುವ ಮೂಲಕ, ಈ ಮೊದಲೇ ಅಧಿಭೋಗದ ಹಕ್ಕುಗಳನ್ನು ನೀಡಲು ಕೋರುವ ಅವಕಾಶವನ್ನು ಪಡೆದುಕೊಂಡಿದ್ದಾರೆ ಎಂಬುದು ಕೆಎಟಿ ಗಮನಕ್ಕೆ ಬಂದಿದೆ. ಆದುದರಿಂದ, ತಿದ್ದುಪಡಿ ಉಪಬಂಧದ, ಎಂದರೆ ಅಧಿನಿಯಮದ 77–ಎ ಪ್ರಕರಣದ ಮೇರೆಗೆ 7–ಎ ನಮೂನೆಯನ್ನು

ಸಲ್ಲಿಸುವ ಮೂಲಕ ಅಧಿಭೋಗದ ಹಕ್ಕುಗಳನ್ನು ಪುನಃ ಕೋರಲು ಅರ್ಜಿದಾರನಿಗೆ ಯಾವುದೇ ಸಮರ್ಥನೆ ಇಲ್ಲ. ಈ ಹಿನ್ನಲೆಯಲ್ಲಿ, ಅರ್ಜಿದಾರನು ಈ ಎರಡೂ ಆದೇಶಗಳನ್ನು ಪ್ರಶ್ನಿಸಿ ಈ ನ್ಯಾಯಾಲಯವನ್ನು ಸಂಪರ್ಕಿಸಿರುತ್ತಾರೆ.

7. ಸರ್ವೆ ಸಂಖ್ಯೆ: 68/2ರ ಸ್ಥಾನದಲ್ಲಿ ಸರ್ವೆ ಸಂಖ್ಯೆ: 189/4ನ್ನು ಮರು–ಸೇರಿಸಲು ತಿದ್ದುಪಡಿ ಕೋರಿ ಅರ್ಜಿ ಸಲ್ಲಿಸಿರುವುದನ್ನು, ಮುಖ್ಯ ಆದೇಶವನ್ನು ಹೊರಡಿಸುವಾಗ ಪರಿಗಣಿಸಿರುವುದಿಲ್ಲ; ನಮೂನೆ–7ರಲ್ಲಿ ಸಲ್ಲಿಸಲಾಗಿರುವ ಅರ್ಜಿಯನ್ನು ತಿರಸ್ಕರಿಸಿರುವುದು, ವಿವಿಧ ಸರ್ವೆ ಸಂಖ್ಯೆಗಳಿಗೆ ಸಂಬಂಧಪಟ್ಟಂತೆ ಇದೆಯೇ ಹೊರತು, ನಮೂನೆ–7ಎ ಮೂಲಕ ಅರ್ಜಿದಾರನು ಕ್ಲೇಮು ಮಾಡಿರುವಂಥ ಸರ್ವೆ ಸಂಖ್ಯೆಗಳಿಗೆ ಸಂಬಂಧಪಟ್ಟಿರುವುದಿಲ್ಲ; ಮತ್ತು ಈ ಮೊಕದ್ದಮೆಯ ವಾಸ್ತವಾಂಶಗಳು ಮತ್ತು ಸಂದರ್ಭಗಳ ಕಡೆಗೆ ಗಮನ ಹರಿಸಿರುವುದಿಲ್ಲ ಎಂದು ಮುಖ್ಯ ವಾದದಲ್ಲಿ ಒತ್ತು ನೀಡಿ ಹೇಳಲಾಗಿದೆ.

8. ಪ್ರತ್ಯರ್ಜಿದಾರ–ಮಾಲೀಕನ ಪರ ವಾದಿಸಿದ ಮಾನ್ಯ ವಕೀಲರು, ಮೇಲೆ ಹೇಳಿದ ವಾದಗಳನ್ನು ಪ್ರಬಲವಾಗಿ ಖಂಡಿಸಿ, ಈ ಸಂಬಂಧದಲ್ಲಿ ಹೊರಡಿಸಲಾದ ಆದೇಶವನ್ನು ಸಮರ್ಥಿಸಿಕೊಂಡಿದ್ದಾರೆ. ಯಾವುದೇ ಸಮಯದಲ್ಲೂ, ಅರ್ಜಿದಾರಳಾಗಲಿ ಅಥವಾ ಆಕೆಯ ತಾಯಿಯಾಗಲಿ, ಸರ್ವೆ ಸಂಖ್ಯೆ: 189/4ಕ್ಕೆ ಸಂಬಂಧಪಟ್ಟಂತೆ ಮಾತ್ರ ಹೊರತುಪಡಿಸಿ, ಅವರು ಕ್ಲೇಮು ಮಾಡಿರದ ಸರ್ವೆ ಸಂಖ್ಯೆ: 68/2 ಅಥವಾ ಸರ್ವೆ ಸಂಖ್ಯೆ: 67/2 ಇವುಗಳಿಗೆ ಸಂಬಂಧಪಟ್ಟಂತೆ ಗೇಣಿದಾರರಾಗಿರಲಿಲ್ಲ ಎಂದು ಅವರು ತೋರಿಸಿಕೊಟ್ಟಿದ್ದಾರೆ. 77ಎ ಪ್ರಕರಣದ ಮೇರೆಗಿನ ವ್ಯವಹರಣೆಯಲ್ಲಿ ತಿದ್ದುಪಡಿ ಅರ್ಜಿಯನ್ನು ಸಮರ್ಥಿಸಲಾಗುತ್ತಿರಲಿಲ್ಲ ಎಂಬುದಾಗಿ ಅವರು ವಾದಿಸಿರುತ್ತಾರೆ. ಸಹಾಯಕ ಆಯುಕ್ತರ ಮುಂದಿದ್ದ ವಿಚಾರಣೆಯ ವ್ಯಾಪ್ತಿಯು ಪರಿಮಿತವಾಗಿತ್ತೆಂದು ಮಂಡಿಸಲು ಅವರು, ***ಲೋಕಯ್ಯ ಪೂಜಾರಿ ಮತ್ತು ಇನ್ನೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*** [1]

1. 2013(1) ಎಕೆಆರ್ 555

ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಪೂರ್ಣಕಾಲಿಕ ಪೀಠವು ನೀಡಿದ ತೀರ್ಪನ್ನು ಅವಲಂಬಿಸಿದ್ದಾರೆ.

9. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಸಹ ಪ್ರಶ್ನಿತ ಆದೇಶವನ್ನು ಬೆಂಬಲಿಸಿರುವರು.

10. ಎಲ್ಲ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ ನಂತರ, ಅರ್ಜಿದಾರರು ಈ ಮೊದಲು ಅವರ ತಾಯಿಯು ಸಲ್ಲಿಸಿದ ನಮೂನೆ-7ನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ಸಂಖ್ಯೆ: 57/3 ಮತ್ತು 67/2 ಇವುಗಳನ್ನು ಒಳಗೊಂಡಿರುವ ಮೂರು ಜಮೀನುಗಳ ಸಂಬಂಧದಲ್ಲಿ ನಮೂನೆ-7ನ್ನು ಸಲ್ಲಿಸಲಾಗಿದೆ ಎಂಬುದು ವಿವಾದವಲ್ಲ. ಸರ್ವೆ ಸಂಖ್ಯೆ: 57/3ಕ್ಕೆ ಸಂಬಂಧಪಟ್ಟಿರುವಷ್ಟರಮಟ್ಟಿಗೆ, ಆಕೆಗೆ ಅಧಿಭೋಗದ ಹಕ್ಕುಗಳನ್ನು ಮಂಜೂರು ಮಾಡಲಾಗಿದೆ. ಸರ್ವೆ ಸಂಖ್ಯೆ: 67/2ಕ್ಕೆ ಸಂಬಂಧಪಟ್ಟಿರುವಷ್ಟರಮಟ್ಟಿಗೆ, ಆಕೆಯ ಅರ್ಜಿಯನ್ನು ತಿರಸ್ಕರಿಸಲಾಗಿತ್ತು. ಈ ಆಜ್ಞೆಯನ್ನು ದಿನಾಂಕ: 29.08.1980 ರಂದು ಭೂ-ನ್ಯಾಯಾಧಿಕರಣವು ಹೊರಡಿಸಿತ್ತು. ಅರ್ಜಿದಾರರ ತಾಯಿಯು ಸದರಿ ಆಜ್ಞೆಯಿಂದ ಸಂತೃಪ್ತರಾಗಿದ್ದರು. ಆಕೆಯು ಅದನ್ನು ಪ್ರಶ್ನಿಸಿರಲಿಲ್ಲ. ಆದುದರಿಂದ, ಸರ್ವೆ ಸಂಖ್ಯೆ: 67/2ಕ್ಕೆ ಸಂಬಂಧಿಸಿದಂತೆ ಅರ್ಜಿಯ ತಿರಸ್ಕರಣೆಯು ಅಂತಿಮತೆಯನ್ನು ತಲುಪಿದೆ.

11. ತಿದ್ದುಪಡಿ ಮೂಲಕ ಅಧಿನಿಯಮದಲ್ಲಿ 77-ಎ ಪ್ರಕರಣದ ಸೇರ್ಪಡೆಯ ನಂತರ, ಅರ್ಜಿದಾರರ ತಾಯಿಯು ನಮೂನೆ-7ಎ ಸಲ್ಲಿಸುವ ಮೂಲಕ ಅದೇ ಸರ್ವೆ ಸಂಖ್ಯೆ: 67/2ಕ್ಕೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕುಗಳನ್ನು ಕ್ಲೇಮು ಮಾಡಲು ಮತ್ತೊಂದು ಅರ್ಜಿಯನ್ನು ನಿರ್ವಹಿಸಿರುವುದಿಲ್ಲ. 45ನೇ ಅಥವಾ 49ನೇ ಪ್ರಕರಣದ ಮೇರೆಗೆ ಜಮೀನಿನ ಅಧಿಭೋಗದಾರನಾಗಿ ನೋಂದಾಯಿತನಾಗಲು ಹಕ್ಕುಳ್ಳ ವ್ಯಕ್ತಿಯು, 77-ಎ ಪ್ರಕರಣದ ಮೇರೆಗೆ ಅರ್ಜಿಯನ್ನು

ನಿರ್ವಹಿಸಲು, ಅದೂ ಸಹ, 77–ಎ ಪ್ರಕರಣದ ಪ್ರಾರಂಭದ ದಿನಾಂಕದಂದು, ಎಂದರೆ ದಿನಾಂಕ: 01.11.1998ರಂದು ಅಂಥ ಜಮೀನಿನ ವಾಸ್ತವಿಕ ಅಧಿಭೋಗ ಮತ್ತು ಸಾಗುವಳಿಯಲ್ಲಿ ಮುಂದುವರೆದಿದ್ದರೆ, 48ಎ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅದರಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಯೊಳಗೆ 48ಎ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಂಥ ಜಮೀನಿನ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳ ನೋಂದಣಿಗಾಗಿ ಅರ್ಜಿ ಸಲ್ಲಿಸಲು ವಿಫಲರಾಗಿದ್ದಾರೆ ಎಂಬುದನ್ನು ಸದರಿ ಉಪಬಂಧವು, ನಿರ್ದಿಷ್ಟವಾಗಿ, 77ಎ ಪ್ರಕರಣದ (1)ನೇ ಉಪ–ಪ್ರಕರಣದ (iii)ನೇ ಖಂಡವು ಸ್ಪಷ್ಟಪಡಿಸುತ್ತದೆ. ಆದುದರಿಂದ, ಪ್ರಸ್ತುತ ಮೊಕದ್ದಮೆಯಲ್ಲಿ, ಸರ್ವೆ ಸಂಖ್ಯೆ: 67/2ಕ್ಕೆ ಸಂಬಂಧಿಸಿದ ಅಧಿಭೋಗದ ಹಕ್ಕುಗಳನ್ನು ಕೋರಿ ಸಲ್ಲಿಸಲಾಗಿರುವ ಅರ್ಜಿದಾರರ ಅರ್ಜಿಯನ್ನು, ಭೂ–ನ್ಯಾಯಾಧಿಕರಣವು ಹೊರಡಿಸಿದ ದಿನಾಂಕ: 29.08.1980ರ ಆದೇಶದ ಪ್ರಕಾರ ಈ ಹಿಂದೆ ತಿರಸ್ಕರಿಸಲಾಗಿರುವುದರಿಂದ, ಅದು ಸಮರ್ಥನೀಯವಾಗಿರಲಿಲ್ಲ.

12. ಸರ್ವೆ ಸಂಖ್ಯೆ: 68/2ರ ಸಂಬಂಧದಲ್ಲಿ, ಅರ್ಜಿದಾರರು, ಈ ಹಿಂದೆ ಸಲ್ಲಿಸಿದ ನಮೂನೆ–7ರಲ್ಲಿ ಸರ್ವೆ ಸಂಖ್ಯೆಯನ್ನು ಸೇರಿಸಿಕೊಂಡಿಲ್ಲವೆಂಬುದನ್ನು ತೋರಿಸಲು ದಾಖಲೆಯಲ್ಲಿ ಏನೂ ಇಲ್ಲ. ಅರ್ಜಿದಾರನಿಗೆ ಚೆನ್ನಾಗಿ ತಿಳಿದಿರುವ ಕಾರಣಗಳಿಗಾಗಿ ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ, ಅವರು ವಾಸ್ತವವಾಗಿ, ಸರ್ವೆ ಸಂಖ್ಯೆ: 68/2ಕ್ಕೂ ಸಹ ಕ್ಲೇಮನ್ನು ಮಂಡಿಸಿದ್ದನ್ನು ತೋರಿಸಲು ದಿನಾಂಕ: 29.08.1980ರಂದು ಭೂ–ನ್ಯಾಯಾಧಿಕರಣವು ಹೊರಡಿಸಿದ ಆದೇಶಕ್ಕೆ ಸಂಬಂಧಿಸಿದ ವಿಷಯಕ್ಕಾಗಿ ಅವರು ನಮೂನೆ–7ರ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಅದು ಏನಾದರೂ ಇರಲಿ, ಅರ್ಜಿದಾರರ ಪ್ರಕಾರ 5 ಎಕರೆ 1 ಸೆಂಟ್ ಅಳತೆಯ ಸರ್ವೆ ಸಂಖ್ಯೆ: 189/4ಕ್ಕೆ ಸಂಬಂಧಿಸಿದಂತೆ ಸಲ್ಲಿಸಬೇಕಾಗಿದ್ದ ಅರ್ಜಿಯ ಕಾರಣದಿಂದ ಸರ್ವೆ ಸಂಖ್ಯೆ: 68/2ಕ್ಕೆ ಸಂಬಂಧಿಸಿದ ತಮ್ಮ ಕ್ಲೇಮನ್ನು ಮುಂದಿಟ್ಟಿರುವುದಿಲ್ಲ. ಸರ್ವೆ ಸಂಖ್ಯೆ: 68/2ರ ಸ್ಥಾನದಲ್ಲಿ ಸಂಪೂರ್ಣವಾಗಿ ಬೇರೆಯದೇ ಆದ ಸರ್ವೆ ಸಂಖ್ಯೆಯನ್ನು ಸೇರಿಸಲು ಅರ್ಜಿದಾರರು ನಮೂನೆ–7 ಇದರ ತಿದ್ದುಪಡಿಯನ್ನು ಬಯಸಿದ್ದಾರೆ.

13. ನಮೂನೆ 7–ಎ ಇದರಲ್ಲಿ ನಮೂದಿಸಲಾದ ಸರ್ವೆ ಸಂಖ್ಯೆಯ ಸ್ಥಾನದಲ್ಲಿ ಮತ್ತೊಂದು ಸರ್ವೆ ಸಂಖ್ಯೆಯನ್ನು ಸೇರಿಸಲು ಅಂಥ ತಿದ್ದುಪಡಿಯನ್ನು ಕೋರಲು 77–ಎ ಪ್ರಕರಣದ ಮೇರೆಗೆ ಯಾವುದೇ ಉಪಬಂಧವಿರುವುದಿಲ್ಲ. ನೈಜವಾದ ಅಥವಾ ಅಜಾಗರೂಕತೆಯ ತಪ್ಪುಗಳಾಗಿದ್ದರೆ ಅದನ್ನು ಒಪ್ಪಬಹುದು. ಆದರೆ, ಅರ್ಜಿ ಸಲ್ಲಿಸಿ ಕ್ಲೇಮು ಮಾಡಲಾಗಿರುವ ಸರ್ವೆ ಸಂಖ್ಯೆಯ ಸ್ಥಾನದಲ್ಲಿ ಸಂಪೂರ್ಣವಾಗಿ ಬೇರೆಯದೇ ಆದ ಸರ್ವೆ ಸಂಖ್ಯೆಯನ್ನು ಮರು–ಸೇರಿಸುವುದು ಬೇರೆ ವಿಷಯ. ವಾಸ್ತವವಾಗಿ ನಮೂನೆ ಸಂಖ್ಯೆ: 7ನ್ನು ಸಲ್ಲಿಸುವಾಗ, 5 ಎಕರೆ 1 ಸೆಂಟ್ ಅಳತೆಯ ಸರ್ವೆ ಸಂಖ್ಯೆ: 189/4ನ್ನು ಸೇರಿಸಲು ಅರ್ಜಿದಾರರ ತಾಯಿಯು ತಪ್ಪಿದ್ದಲ್ಲಿ, ಆಕೆಯ ಖಂಡಿತವಾಗಿಯೂ, ನಮೂನೆ ಸಂಖ್ಯೆ: 7ನ್ನು ವಿಲೇ ಮಾಡುವ ಮುಂಚೆಯೇ ಅದನ್ನು ಸರಿಪಡಿಸಲು ಕೇಳಬಹುದಾಗಿತ್ತು. ವಾಸ್ತವದಲ್ಲಿ ಎರಡು ಇತರ ಜಮೀನುಗಳ ಸಂಬಂಧದಲ್ಲಿ ಕೋರಿಕೆಯನ್ನು ನಿರಾಕರಿಸುವಾಗ, ಆಕೆಯು ಅವುಗಳಲ್ಲಿ ಒಂದು ಜಮೀನಿನ ಸಂಬಂಧದಲ್ಲಿನ ಅಧಿಭೋಗದ ಹಕ್ಕುಗಳನ್ನು ನೀಡಿದ್ದಕ್ಕಾಗಿ ಅದನ್ನು ಸೇರ್ಪಡೆ ಮಾಡದಿರುವ ಬಗ್ಗೆ ತನಗೆ ತಿಳಿದಿರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ.

14. ಭೂ–ನ್ಯಾಯಾಧಿಕರಣದ ಮುಂದಿರುವ ವಿಚಾರಣೆಯನ್ನು 48ಎ ಪ್ರಕರಣದ ಮೇರೆಗೆ ಗ್ರಹಿಸಬಹುದಾಗಿದೆ. 77ಎ ಪ್ರಕರಣದಂತಲ್ಲದೆ, ಅದು ವ್ಯಾಪಕ ಅಧಿಕಾರಗಳನ್ನು ನ್ಯಾಯಾಧಿಕರಣಕ್ಕೆ ನಿಹಿತಗೊಳಿಸುತ್ತದೆ. ನಮೂನೆ–7ರ ತಿದ್ದುಪಡಿಗಳನ್ನು ಕೋರಿ ಸಲ್ಲಿಸಲಾದ ಅರ್ಜಿಯನ್ನು ಪ್ರಾಯಶಃ ಸದರಿ ವ್ಯವಹರಣೆಗಳಲ್ಲಿ ಸಮರ್ಥಿಸಬಹುದಾಗಿತ್ತು; ಪರಂತು, ಸರ್ವೆ ಸಂಖ್ಯೆಯನ್ನು ಮತ್ತು ಅದರ ಅಳತೆಯನ್ನು ಸೂಕ್ತವಾಗಿ ವಿವರಿಸುವಲ್ಲಿ ಎಸಗಿದ ಯಾವುದೇ ವ್ಯತ್ಯಾಸ ಅಥವಾ ತಪ್ಪನ್ನು ಸರಿಪಡಿಸಲು ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ತೋರಿಸಲಾಗಿದೆ.

15. 77–ಎ ಪ್ರಕರಣದ ಮೇರೆಗೆ ಸಹಾಯಕ ಆಯುಕ್ತರ ಮುಂದೆ ಸಲ್ಲಿಸಲಾದ ಪ್ರಸ್ತುತ ಅರ್ಜಿಗೆ ಸಂಬಂಧಪಡುವಷ್ಟರಮಟ್ಟಿಗೆ, ಅಂಥ ಅಧಿಕಾರವನ್ನು, ಅರ್ಜಿದಾರನು ಗೇಣಿದಾರನಾಗಿರುವ ಜಮೀನನ್ನು ನೀಡಲು ಕೋರಿ ಅರ್ಜಿಯನ್ನು

ಸಲ್ಲಿಸಲು ಗೇಣಿದಾರನಿಗೆ ಸಾಧ್ಯವನ್ನಾಗಿಸುವುದು 77–ಎ ಪ್ರಕರಣದ ನೈಜ ಉದ್ದೇಶವಾಗಿದೆ ಎಂಬಂತೆ ಒಪ್ಪಲಾಗುವುದಿಲ್ಲ ಹಾಗೂ ಅದರ ಸಂಬಂಧದಲ್ಲಿ, ಆತನು ನಮೂನೆ–7ನ್ನು ಸಲ್ಲಿಸುವ ಮೂಲಕ ನಿಗದಿಪಡಿಸಲಾದ ಸಮಯದೊಳಗೆ ತನ್ನ ಅಧಿಭೋಗದ ಹಕ್ಕುಗಳನ್ನು ಕೋರಲು ವಿಫಲನಾಗಿದ್ದಾನೆ. 77–ಎ ಪ್ರಕರಣದ ಮೇರೆಗೆ ನಮೂನೆ–7ಎ ಯನ್ನು ಸಲ್ಲಿಸುವಾಗಲೂ ಸಹ, ನಮೂನೆ–7ನ್ನು ಸಲ್ಲಿಸುವ ಸಮಯದಲ್ಲಿ ತನ್ನ ತಾಯಿಯು ಯಾವ ಸರ್ವೆ ಸಂಖ್ಯೆಯನ್ನು ಕ್ಲೇಮು ಮಾಡಲು ಬಿಟ್ಟುಬಿಟ್ಟಿದ್ದರು/ತಪ್ಪಿದ್ದರು ಎಂಬುದು ತನಗೆ ಖಚಿತವಿರಲಿಲ್ಲ ಎಂದು ಅರ್ಜಿದಾರರು ವಾದಿಸಿರುವುದನ್ನು ಒಪ್ಪಲಾಗುವುದಿಲ್ಲ. ವಾಸ್ತವವಾಗಿ, ಈ ಹಿಂದೆ ನಿರಾಕರಿಸಲಾದ ಸರ್ವೆ ಸಂಖ್ಯೆ: 67/2ನ್ನು ಹೊಂದಿರುವ ಜಮೀನನ್ನು ನೀಡಲು ಸಹ ಆಕೆಯು ಕೋರಿದ್ದರೆಂದು ವಾಸ್ತವಾಂಶಗಳಿಂದ ಕಂಡುಬರುತ್ತದೆ. ಆಕೆಯು ಇನ್ನೊಂದು ಸರ್ವೆ ಸಂ. 68/2ನ್ನು ಕ್ಲೇಮು ಮಾಡಿದ್ದರು ಹಾಗೂ ಆಕೆಯ ಮರಣಾನಂತರ, ಸರ್ವೆ ಸಂಖ್ಯೆ: 189/4ನ್ನು ನಮೂದಿಸುವ ಬದಲಾಗಿ, ಸರ್ವೆ ಸಂಖ್ಯೆ: 68/2ನ್ನು ನಮೂದಿಸುವಲ್ಲಿ ತಪ್ಪನ್ನು ಎಸಗಲಾಗಿದೆ ಎಂದು ಹೇಳಿ ಆಕೆಯ ಮಗಳು–ಅರ್ಜಿದಾರಳು ಅರ್ಜಿಯೊಂದಿಗೆ ಇಲ್ಲಿಗೆ ಬಂದಿದ್ದರು.

16. ಸರ್ವೆ ಸಂಖ್ಯೆ: 68/2 ಇದು ಕೇವಲ 44 ಸೆಂಟ್‌ಗಳ ಅಳತೆಯದ್ದಾಗಿದ್ದು ಮತ್ತು ಸರ್ವೆ ಸಂಖ್ಯೆ: 189/4 ಇದು, 5 ಎಕರೆ 1 ಸೆಂಟ್ ಅಳತೆಯದ್ದಾಗಿರುವುದರಿಂದ, ಪ್ರಸ್ತುತ ಮೊಕದ್ದಮೆಯಲ್ಲಿ ಸರ್ವೆ ಸಂಖ್ಯೆಗಳನ್ನು ನಮೂದಿಸುವಲ್ಲಿ ಯಾವುದೇ ದ್ವಂದ್ವ ಇರಬೇಕಿರಲಿಲ್ಲ. ಆದುದರಿಂದ, ಇದು ಸರ್ವೆ ಸಂಖ್ಯೆಯನ್ನು ನಮೂದಿಸುವಾಗ ಪ್ರಾಮಾಣಿಕ ತಪ್ಪನ್ನು ಎಸಗಿದ ಮೊಕದ್ದಮೆ ಎಂದು ಹೇಳಲಾಗುವುದಿಲ್ಲ. ತಪ್ಪಿನ ಸೋಗಿನಲ್ಲಿ ಅರ್ಜಿದಾರರು, ಹೊಸ ಸರ್ವೆ ಸಂಖ್ಯೆಗೆ ಕ್ಲೇಮನ್ನು ಇಡಲು ಕೋರಿದ್ದಾರೆ. 77ಎ ಪ್ರಕರಣದ ಮೇರೆಗೆ ಇದು ಅಸಾಧ್ಯ. ಇದಕ್ಕೆ ಅವಕಾಶ ನೀಡಿದರೆ, ಅರ್ಜಿಗಳನ್ನು ಸಲ್ಲಿಸಲು ಶಾಸನಬದ್ಧವಾಗಿ ನಿಗದಿಪಡಿಸಿದ ಸಮಯ ಮುಕ್ತಾಯವಾದ ನಂತರವೂ ಸಹ ಇತರ ಜಮೀನುಗಳನ್ನು ಸೇರಿಸಿಕೊಳ್ಳುವ ಮೂಲಕ ಕ್ಲೇಮನ್ನು ಇಡಲು ಕ್ಲೇಮುದಾರನಿಗೆ ಸಾಧ್ಯವಾಗುತ್ತದೆ. ಆದುದರಿಂದ, ಅಂಥ ಅರ್ಜಿಯನ್ನು

ಪುರಸ್ಕರಿಸಲಾಗುವುದಿಲ್ಲ ಮತ್ತು ಇದನ್ನು ಸಹಾಯಕ ಆಯುಕ್ತರು ಸರಿಯಾಗಿಯೇ ತಿರಸ್ಕರಿಸಿದ್ದಾರೆ.

17. ನಮೂನೆ 7ಎ ಅಡಿಯಲ್ಲಿ ಕ್ಲೇಮಿನ ಗುಣಾರ್ಹತೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ದಿನಾಂಕ: 01.03.1974ರಂದು ಇದ್ದಂತೆ ಜಮೀನನ್ನು ಗೇಣಿಗೆ ನೀಡಲಾಗಿತ್ತು ಎಂದು ಸಾಬೀತುಪಡಿಸಲು ಯಾವುದೇ ಮುಖ್ಯ ಸಾಕ್ಷ್ಯ ಇರಲಿಲ್ಲವೆಂದು ಸಹಾಯಕ ಆಯುಕ್ತರು ತಮ್ಮ ನಿರ್ಣಯವನ್ನು ದಾಖಲಿಸಿದ್ದಾರೆ. ಈ ನ್ಯಾಯಾಲಯದ ಮುಂದೆ ಸಹ, ದಿನಾಂಕ: 01.03.1974ರಂದು ಇದ್ದಂತೆ ರಾಜ್ಯದಲ್ಲಿ ಜಮೀನು ನಿಹಿತವಾಗಿತ್ತೆಂದು ತೋರಿಸಲು ಯಾವುದೇ ಮುಖ್ಯ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ. ಸರ್ವೆ ಸಂಖ್ಯೆ: 68/2 ಅಥವಾ ಸರ್ವೆ ಸಂಖ್ಯೆ: 189/4 ಇವು ಅರ್ಜಿದಾರರ ಸಾಗುವಳಿಗೆ ಒಳಗಾಗಿದ್ದವು ಎಂದು ತೋರಿಸುವ ಸಂಬಂಧದಲ್ಲಿ ಅಂಥ ಯಾವುದೇ ದಾಖಲೆ ಇರುವುದಿಲ್ಲ. ಆದುದರಿಂದ ಗೇಣಿಗೆ ಒಳಪಟ್ಟ ಜಮೀನಾಗಿ ಅದು ರಾಜ್ಯದಲ್ಲಿ ನಿಹಿತವಾಗಿತ್ತು.

18. ಮೇಲೆ ಉಲ್ಲೇಖಿಸಿದ ***ಲೋಕಯ್ಯ ಪೂಜಾರಿ*** ಮೊಕದ್ದಮೆಯಲ್ಲಿ ಪೂರ್ಣ ಪೀಠವು ನಿರ್ಣಯಿಸಿದಂತೆ, ಸಹಾಯಕ ಆಯುಕ್ತರು, ಸದರಿ ಜಮೀನು ಗೇಣಿಗೆ ನೀಡಿದ ಜಮೀನಾಗಿತ್ತು ಮತ್ತು ರಾಜ್ಯದಲ್ಲಿ ನಿಹಿತವಾಗಿತ್ತು ಎಂದು ತೋರಿಸಲು ಅಧಿಕೃತ ದಾಖಲೆಗಳ ಸಂಬಂಧದಲ್ಲಿ ಹೊರತುಪಡಿಸಿ ಬೇರೆ ಸಾಕ್ಷ್ಯಕ್ಕೆ ದಾರಿ ಮಾಡಿಕೊಡಲು ಪಕ್ಷಕಾರರಿಗೆ ಅನುಮತಿ ನೀಡುವ ಮೂಲಕ ನಿರ್ಣಯಗಳನ್ನು ದಾಖಲಿಸಲು ಯಾವ ಅಧಿಕಾರ ಅಥವಾ ಪ್ರಾಧಿಕಾರವನ್ನು ಹೊಂದಿರುವುದಿಲ್ಲ. ಅರ್ಜಿದಾರರು ಭರವಸೆ ಇಡಬಹುದಾಗಿದ್ದ ದಸ್ತಾವೇಜುಗಳೆಂದರೆ ಆರ್‌ಟಿಸಿ ಉದ್ಧೃತ ಭಾಗಗಳು, ಭೂ–ಕಂದಾಯ ಸ್ವೀಕೃತಿಗಳು ಮತ್ತು ಅಂಥ ಇತರ ಸರ್ಕಾರಿ ದಾಖಲೆಗಳು. ಸದರಿ ಜಮೀನನ್ನು ಗೇಣಿಗೆ ನೀಡಲಾಗಿತ್ತು ಮತ್ತು ರಾಜ್ಯದಲ್ಲಿ ನಿಹಿತವಾಗಿತ್ತು ಎಂದು ತೋರಿಸಲು ದಾಖಲೆಯಲ್ಲಿ ಈ ಯಾವ ದಸ್ತಾವೇಜುಗಳನ್ನು ಇರಿಸಿಲ್ಲ. ಇನ್ನೊಂದೆಡೆ, ಕೆಲವು ಕಂದಾಯ ದಾಖಲೆಗಳನ್ನು ಎಂದರೆ – ಆರ್‌ಟಿಸಿಗಳನ್ನು ಪ್ರತ್ಯರ್ಜಿದಾರರು ಹಾಜರುಪಡಿಸಿರುವುದಿಲ್ಲ. ಸರ್ವೆ ಸಂಖ್ಯೆ: 189/4ರ

ಸಂಬಂಧದಲ್ಲಿ ಗೇಣಿದಾರರಾಗಿ ಅರ್ಜಿದಾರರ ಅಥವಾ ಆಕೆಯ ತಾಯಿಯ ಹೆಸರನ್ನು ಅವರು ಬಹಿರಂಗಗೊಳಿಸಿರುವುದಿಲ್ಲ.

19. ಆದುದರಿಂದ, ಇದು, ಅರ್ಜಿದಾರರು ಯಾವುದೇ ಹಕ್ಕುಗಳನ್ನು ಹೊಂದಿರದ ಅಥವಾ ಅದನ್ನು ಸಾಬೀತುಪಡಿಸುವಲ್ಲಿ ಅವರು ಯಶಸ್ವಿಯಾಗದಿರುವ ಆಕ್ಷೇಪಣೆಯಲ್ಲಿರುವ ಜಮೀನುಗಳ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳನ್ನು ಪದೇ ಪದೇ ಕೋರಿ ಕ್ಲೇಮನ್ನು ಮಂಡಿಸಲು ಅವರು ಪ್ರಯತ್ನಿಸಿರುವ ಮೊಕದ್ದಮೆಯಾಗಿದೆ. ಆದ್ದರಿಂದ, ಕೆಳಗೆ ಉಲ್ಲೇಖಿಸಿರುವ ಎರಡೂ ಪ್ರಾಧಿಕಾರಿಗಳು ದಾಖಲಿಸಿದ ಸಮವರ್ತಿ ನಿರ್ಣಯಗಳ ವಿಷಯದಲ್ಲಿ ದೋಷಗಳನ್ನು ಕಂಡುಹಿಡಿಯಲಾಗುವುದಿಲ್ಲ. ಆದುದರಿಂದ, ಈ ರಿಟ್ ಅರ್ಜಿಗಳನ್ನು ವಜಾಗೊಳಿಸಲಾಗಿದೆ.

---